# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

**ಎಸ್‌ಸಿ. 119/2022**

| | | |
|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಭೈರಪ್ಪ | **ಪ್ರಮಾಣ ಮಾಡಿಸಿದ ದಿನಾಂಕಃ** |
| **ತಂದೆ/ಗಂಡನ ಹೆಸರು** | ಃ ಶ್ರೀ ಬಿ.ಸಿದ್ದಯ್ಯ | **28.08.2024** |
| **ವಯಸ್ಸು** | ಃ **54 ವರ್ಷ** | |
| **ವೃತ್ತಿ** | ಃ ರೈಲ್ವೆ ಇಲಾಖೆಯಲ್ಲಿ ಕೆಲಸ | **ಪ್ರಾ.ಸಾ. ಃ 29** |
| **ವಾಸಸ್ಥಳ** | ಃ ರೈಲ್ವೆ ಲೇಔಟ್, ಮೈಸೂರು | **ಚಾ.ಸಾ. ಃ 34** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ದಿಃ*22.10.2021* ರಂದು ನಮ್ಮ ಮನೆ ಹತ್ತಿರ ಕೊಲೆಯಾಗಿದ್ದ ಬಗ್ಗೆ ಮಹಜರ್ ಮಾಡಿದ್ದರು. ಕೊಲೆಯಾಗಿದ್ದ ಮಹಿಳೆಯ ಮನೆ ಬಳಿಯೇ ಆ ಮಹಜರ್ ಮಾಡಿದ್ದರು. ಆ ಕಾಲಕ್ಕೆ ಮನೆಯ ಮುಂಭಾಗದ ರಸ್ತೆಯಲ್ಲಿ ಒಂದು ಗಂಡಸು ಮತ್ತು ಒಂದು ಹೆಂಗಸಿನ ಶವಗಳು ಬಿದ್ದಿದ್ದವು. ಆ ಎರಡು ಶವಗಳು ಅಂದಾಜು *20* ಅಡಿ ಅಂತರದಲ್ಲಿ ಬಿದ್ದಿದ್ದವು. ಗಂಡಸಿನ ಶವ ಅಂಗಾತ ಬಿದ್ದಿತ್ತು. ಹೆಂಗಸಿನ ಶವ ತಲೆ ಕೆಳಗಾಗಿ ಬಿದ್ದಿತ್ತು. ಆ ಕಾಲಕ್ಕೆ ನನ್ನ ಸಮಕ್ಷಮ ಸ್ಥಳ ಮಹಜರ್ ಮಾಡಿ ನನ್ನ ಸಹಿ ಪಡೆದಿದ್ದರು. ಆ ಮಹಜರ್ ಕಾಲಕ್ಕೆ ಪೋಲೀಸರು ಆ ಸ್ಥಳದಲ್ಲಿ ಬಿದ್ದಿದ್ದ ಮೃತನ ಶೂ, ಬಟ್ಟೆ, ರಕ್ತ ಹತ್ತಿದ ಮಣ್ಣನ್ನು ವಶಕ್ಕೆ ಪಡೆದಿದ್ದರು. ಆ ಮಹಜರ್ ಕಾಲಕ್ಕೆ ಆ ಶವಗಳನ್ನು ತೆಗೆದುಕೊಂಡು ಹೋಗಿದ್ದರು. ಬೆಳಗಿನ ಜಾವ *1* ರಿಂದ *3* ಗಂಟೆವರೆಗೆ ಆ ಮಹಜರ್ ಮಾಡಿದ್ದರು. ಆ ಕಾಲಕ್ಕೆ ಜೈಶಂಕರ್ ಮತ್ತು ಶ್ರೀಕಾಂತ್ ಎನ್ನುವವರು ಸಹ ಆ ಮಹಜರ್ ಗೆ ಸಹಿ

ಹಾಕಿದ್ದರು. ಆ ಮಹಜರ್ ಕಾಲಕ್ಕೆ ಮೃತ ಮಹಿಳೆಯ ಮನೆಯವರು ಅಲ್ಲಿಯೇ ನಿಂತಿದ್ದರು. ಜೀಪ್ ಲೈಟ್ ಮತ್ತು ಟಾರ್ಚ್ ಲೈಟ್ ಬೆಳಕಲ್ಲಿ ಮಹಜರ್ ಮಾಡಿದ್ದರು. ಈಗ ನಾನು ನೋಡುತ್ತಿರುವ ನಿ.ಪಿ–*2* ಆ ಕಾಲಕ್ಕೆ ಮಾಡಿದ್ದ ಮಹಜರ್ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಸಹಿಯನ್ನು ನಿ.ಪಿ–*2(ಬಿ)* ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ನೋಟಿಸ್ ಮೇಲಿನ ಸಹಿ ಕೂಡ ಅದೇ ಕಾಲಕ್ಕೆ ಪಡೆದಿದ್ದರು. ಸದರಿ ನೋಟಿಸ್ ಅನ್ನು ನಿ.ಪಿ–*57* ಮತ್ತು ಸಹಿಯನ್ನು ನಿ.ಪಿ–*57(ಎ)* ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ನಿ.ಪಿ–*3* ಮತ್ತು *4* ಪೊಟೋಗಳನ್ನು ಆ ಮಹಜರ್ ಕಾಲಕ್ಕೆ ತೆಗೆದಿದ್ದರು. ಆ ದಿನ ಅಲ್ಲಿ ಬಿದ್ದಿದ್ದ ಕೂದಲನ್ನು ಸಹ ಅಮಾನತ್ತು ಪಡಿಸಿಕೊಂಡಿದ್ದರು. ಈಗ ನಾನು ನೋಡುತ್ತಿರುವ ಎಂ.ಒ–*1* ರಿಂದ *6* ಎಂದು ಗುರುತಿಸಿರುವ ವಸ್ತುಗಳೇ ಆ ದಿನ ಮಹಜರ್ ಕಾಲಕ್ಕೆ ಅಮಾನತ್ತು ಪಡಿಸಿಕೊಂಡ ವಸ್ತುಗಳು ಇವೆ.

<u>ಪಾಟೀ ಸವಾಲು : ಆರೋಪಿ ಪರ ವಕೀಲರಾದ ಶ್ರೀ ಸಿ.ಪಿ ರವರಿಂದಃ-</u>

*2.* ನಾನು ರೈಲ್ವೇ ವರ್ಕ್ ಶಾಪ್ ನಲ್ಲಿ ಕೆಲಸ ಮಾಡುತ್ತೇನೆ. ನನಗೆ *56* ವರ್ಷ ವಯಸ್ಸಾಗಿದೆ. ಆ ದಿನ ಮಹಜರ್ ಗೆ ನನ್ನನ್ನು ಬೇರೆ ಯಾರು ಕರೆದಿರಲಿಲ್ಲ ನಾನು ಅಲ್ಲಿಯೇ ಇದ್ದೆ. ಆ ಕಾಲಕ್ಕೆ ಪೋಲೀಸರು ನನಗೆ ನೋಟಿಸ್ ಕೊಟ್ಟಿದ್ದರು ಆದರೆ ನನ್ನನ್ನು ಯಾರು ಕರೆದಿದ್ದರು ಎಂದು ನಿಖರವಾಗಿ ಹೆಸರು ಗೊತ್ತಿಲ್ಲ. ಮೃತ ಮಹಿಳೆ ಮನೆಯ ಮುಂದೆ ಖಾಲಿ ಜಾಗವಿದೆ. ಒಂದು ಪಕ್ಕದಲ್ಲಿ ಅರ್ಧ ಕಟ್ಟಿದ ಮನೆಯಿದೆ. ಇನ್ನೊಂದು ಪಕ್ಕದಲ್ಲಿ ಒಂದು ಮನೆಯಿದೆ. ಅದು ಆ ಮಹಿಳೆಯ ಮನೆಯಿಂದ *100* ಮೀ ದೂರದಲ್ಲಿದೆ. ಶವ ಬಿದ್ದಿದ್ದ ಸ್ಥಳದಲ್ಲಿ ಲೈಟ್ ಇಲ್ಲ. ಆ ಮನೆಯಿಂದ *30* ಅಡಿ ದೂರದಲ್ಲಿ ಲೈಟ್ ಇದೆ. ಮೃತ ಮಹಿಳೆ ಮನೆ ಉತ್ತರದ ಕಡೆ ಬಾಗಿಲು ಇದೆ. ಮನೆಯ ಮುಂದಗಡೆ ರಸ್ತೆ ಪಕ್ಕದ ಫುಟ್ ಪಾತ್ ನಲ್ಲಿ ಗಂಡಸಿನ ಶವ ಬಿದ್ದಿತ್ತು.

ಹೆಂಗಸಿನ ಶವ ಮನೆಯಿಂದ ಸ್ವಲ್ಪ ದೂರದಲ್ಲಿ ಬಿದ್ದಿತ್ತು. ಆ ಮನೆಯಿಂದ ಹೊರಗಡೆ ಬಲಕ್ಕೆ ಹೆಂಗಸಿನ ಶವ ಮತ್ತು ಮನೆಯ ಎದುರುಗಡೆ ಗಂಡಸಿನ ಶವ ಬಿದ್ದಿತ್ತು. ಮನೆಯ ಬಾಗಿಲಿನಿಂದ ಶವದ ವರೆಗೆ ಅಳತೆ ಮಾಡಿದ್ದರು ಆದರೆ ಅಳತೆ ಈಗ ನೆನಪಿಲ್ಲ. ಮನೆಯ ಬಾಗಿಲಿನಿಂದ ಅಂದಾಜು *10-12* ಅಡಿ ದೂರದಲ್ಲಿ ಗಂಡಸಿನ ಶವ, *18-20* ಅಡಿ ದೂರದಲ್ಲಿ ಹೆಂಗಸಿನ ಶವ ಬಿದ್ದಿತ್ತು. ಎರಡು ಶವಗಳು ಬಿದ್ದಿದ್ದ ಸ್ಥಳದಲ್ಲಿ ರಕ್ತ ಹತ್ತಿದ ಮಣ್ಣನ್ನು ಅಮಾನತ್ತು ಪಡಿಸಿಕೊಂಡಿದ್ದರು. ಮಣ್ಣು ಹಾಕಿದ ಡಬ್ಬದ ಮೇಲೆ ಯಾವಾವ ಸ್ಥಳದಲ್ಲಿ ಪಡೆದಿದ್ದು ಎಂದು ಬರೆದುಕೊಂಡಿದ್ದರು. ಬೇರೆ ಸ್ಥಳದಿಂದ ರಕ್ತ ಹತ್ತಿದ ಮಣ್ಣನ್ನು ಸಂಗ್ರಹಿಸಿಲ್ಲ.

*3.* ಆ ಕಾಲಕ್ಕೆ ಪೋಲೀಸರು ನಕ್ಷೆಯನ್ನು ಸಹ ತಯಾರಿಸಿದ್ದರು. ಈಗ ನಾನು ನೋಡುತ್ತಿರುವ ನಕಾಶೆ ಅದೇ ಇರುತ್ತದೆ. ಸದರಿ ನಕಾಶೆಯನ್ನು ನಿ.ಪಿ-*2*(ಸಿ) ಎಂದು ಗುರುತಿಸಿದೆ. ನಿ.ಪಿ-*2*(ಸಿ) ನಕಾಶೆಯಲ್ಲಿ ಶವ ಬಿದ್ದಿದ್ದ ಸ್ಥಳಗಳು ನನಗೆ ಸರಿಯಾಗಿ ಗೊತ್ತಾಗು ತ್ತಿಲ್ಲ. ಪೋಲೀಸರು ಸಂಗ್ರಹಿಸಿದ್ದ ಕೂದಲು ಹೆಂಗಸಿನ ಶವದ ಬಳಿ *5-6* ಅಡಿ ದೂರದಲ್ಲಿ ಇತ್ತು. ನಕಾಶೆಯಲ್ಲಿ ಕೂದಲು ಸಂಗ್ರಹಿಸಿದ್ದ ಜಾಗ ಮತ್ತು ರಕ್ತದ ಮಣ್ಣು ಸಂಗ್ರಹಿಸಿದ ಜಾಗದ ಬಗ್ಗೆ ನಮೂದು ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಮಹಜರ್ ಕಾಲಕ್ಕೆ ನಾನು ಹಾಜರಿರಲಿಲ್ಲ ಎಂದರೆ ಸರಿಯಲ್ಲ. ಬೆಳಗಿನ ಜಾವ *3* ಗಂಟೆಗೆ ಶವಗಳನ್ನು ಆಸ್ಪತ್ರೆಗೆ ಸಾಗಿಸಿದ್ದರು.

ಮರು ವಿಚಾರಣೆ:- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು